# ನೀರಿನೊಳಗಿನ ಮಂಜು

■ ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ



## ತಣ್ಣನೆಯ ಸಂಘರ್ಷದ ಗೋಡೆಗೆ ಸಂವಾದದ ಕಿಂಡಿ

ರಾಯರಿಗೆ ರಾಜಾರಾಂ ಮತ್ತು ಜಯಂತಿ ಅವರು ಮಾತನಾಡುತ್ತಿದ್ದುದು ಎಲ್ಲೋ ದೂರದಿಂದ ಮಾತನಾಡಿದ ಹಾಗೆ ಕೇಳಿಸುತ್ತಿತ್ತು. ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಬೇಕು ಎನ್ನುವುದು ಅವರಿಗೆ ಹೊಳೆಯುತ್ತಿದ್ದರೂ ಮಂಪರಿನ ಸ್ಥಿತಿಯಲ್ಲಿ ಅವರು ಇದ್ದುದರಿಂದ ಅದು ಸಾಧ್ಯವಾಗಲಿಲ್ಲ.

ರಾಜಾರಾಂ ರಾಯರಿದ್ದಲ್ಲಿಗೆ ಬಂದು 'ಸರ್, ಸರ್' ಎಂದು ಕರೆಯುತ್ತಿದ್ದಂತೆ ರಾಯರು 'ಎಸ್' ಎಂದು ಕಣ್ಣೊಡೆದರು. 'ನನಗೆ ನಿಮ್ಮ ಮಾತುಗಳು ಕೇಳಿಸುತ್ತಿದ್ದವು' ಎಂದು ಮತ್ತಗೆ ಹೇಳಿದ ರಾಯರು, 'ಈಗ ನಿಮ್ಮ ಹೆಲ್ಪ್ ಬೇಡ ಸ್ವಾಮಿ. ನಾನೇ ಏಳಬಲ್ಲೆ' ಎಂದು ಎದ್ದು ಕುಳಿತರು. ಜಯಂತಿ 'ನಿಮ್ಮ ತಿಂಡಿ ನೀವಿದ್ದಲ್ಲಿಗೆ ತರಲೇ ಅಥವಾ ನೀವು ಡೈನಿಂಗ್ ಹಾಲ್‌ಗೆ ಬರಬಹುದಾ?' ಎಂದು ಕೇಳಿದಳು. ರಾಯರು 'ಈಗ ನಾನು ನಿನಗೆ ಕೊಟ್ಟ ಕಷ್ಟಗಳೇ ಸಾಕು ಮಾರಾಯಿತಿ. ಇನ್ನು ನಿನ್ನಿಂದ ಚಾಕರಿ ಮಾಡಿಕೊಳ್ಳುವುದೆಂದರೆ ಅದು ಖಂಡಿತ ಅಕ್ಷಮ್ಯ ಅಪರಾಧ' ಎನ್ನುತ್ತಾ ಮೇಲೆದ್ದು ಡೈನಿಂಗ್ ಟೇಬಲ್ಲಿನ ಮುಂದೆ ಬಂದು ಕುಳಿತರು.

ರಾಜಾರಾಂ 'ಆಲ್ ರೈಟ್, ಬರುತ್ತೇನೆ ಸರ್' ಎಂದು ನಮಸ್ಕರಿಸಿ ಹೊರಟುನಿಂತರು. ಆಗ ಜಯಂತಿ 'ಇಲ್ಲ. ನೀವು ತಿಂಡಿ ತಿನ್ನಲೇಬೇಕು ಅಥವಾ ಟೀ ಕುಡಿಯಬೇಕು' ಎಂದು ಅವರನ್ನು ಒತ್ತಾಯಿಸಿದಳು.

ರಾಜಾರಾಂ ಟೀ ಕುಡಿದು ಹೋದಮೇಲೆ ಜಯಂತಿ ರಾಯರಲ್ಲಿ, 'ನಿಮ್ಮ ಶ್ರೀಮತಿಯವರಿಗೆ ಈ ವಿಷಯ ತಿಳಿಸಬೇಡವೇ? ಒಂದು ಫೋನು ಕಾಲ್ ಮಾಡಬಹುದಲ್ಲ ನೀವು?' ಎಂದು ಪ್ರಶ್ನಿಸಿದಳು.

ರಾಯರು ತುಂಡರಿಸುತ್ತಿದ್ದ ಇಡ್ಲಿಯನ್ನು ಮತ್ತೂ ತುಂಡು ಮಾಡುತ್ತಾ ಆ ಇಡ್ಲಿಗೆ ಎಲ್ಲಿ ನೋವಾಗುತ್ತದೋ ಎಂಬಂತೆ ತನ್ನ ಬಾಯಲ್ಲಿಟ್ಟು ಎರಡು ಸಲ ಜಗಿದರು. ಆಮೇಲೆ ಮೆತ್ತಗಿನ ಸ್ವರದಲ್ಲಿ 'ಎಸ್, ನೀನು ಹೇಳುವುದೇನೋ ಸರಿ ಜಯಂತಿ. ಬಟ್ ನಾನು ವಿಷಯ ಹೇಳಿದ ತಕ್ಷಣ ಆಕೆ ಕಂಗಾಲಾಗುತ್ತಾಳೆ. ಅಷ್ಟೇ ಅಲ್ಲ, ಆಕೆ ರಾಂಪುರಕ್ಕೆ ಬರುತ್ತೇನೆ ಎಂದು ಕಾರು ಮಾಡಿಕೊಂಡು ಬರಲೂ ರೆಡಿ' ಎಂದರು ನಗುತ್ತ.

'ಓ ಅಷ್ಟೂ ಪ್ರೀತಿಯೇ ನಿಮ್ಮ ಮೇಲೆ ಮೇಡಂಗೆ?'

'ಅಫ್‌ಕೋರ್ಸ್! ಪ್ರೀತಿಯೇ! ಆದರೆ ಎಷ್ಟೋ ಬಾರಿ ಈ ಪ್ರೀತಿ ಎನ್ನುವುದು ದೇಹದ ಮೇಲಿನ ಯಜಮಾನಿಕೆಗೆ ಆಸ್ಪದ ಕೊಡುತ್ತದೆ'.

'ಅಂದರೆ?'

'ಅಂದರೆ ಏನು ಎಂದು ಈ ಊರಲ್ಲಿದ್ದಾಗ ಸ್ವಲ್ಪ ನೇರವಾಗಿ ಮತ್ತು ಸ್ವಲ್ಪ ಪರೋಕ್ಷವಾಗಿ ಈಗಾಗಲೇ ನಾನು ನಿನಗೆ ಹೇಳಿದ್ದೆ. ನೀನು ಅದನ್ನು ಆಗ ಸೂಕ್ಷ್ಮವಾಗಿ ಗ್ರಹಿಸಿದ ಹಾಗಿಲ್ಲ. ಅವಳಿಗೆ ತನ್ನ ಗಂಡ ಯಾವ ಹೆಣ್ಣಿನ ಜೊತೆಯೂ ಸಲಿಗೆಯಿಂದ ಇರಬಾರದು. ಹೆಣ್ಣುಕ್ಕಳಲ್ಲಿ ಹೆಚ್ಚು ಮಾತನಾಡಬಾರದು ಇತ್ಯಾದಿಯಲ್ಲೇ ಪ್ರೀತಿ ಹೆಚ್ಚು. ಇದು ಒಂದು ರೀತಿಯಲ್ಲಿ ಗಂಡಿನ ಪ್ರಾಮಾಣಿಕತೆಯನ್ನು ಪ್ರಶ್ನಿಸುವ ವಿಚಾರವಾದರೆ, ಇನ್ನೊಂದು ರೀತಿಯಲ್ಲಿ ತನ್ನ ಗಂಡ ಎನ್ನುವವನು ತನ್ನ ಸಾಮ್ರಾಜ್ಯದ ಒಂದು ಭಾಗ ಅಥವಾ ಭಾವ ಎನ್ನುವ ಮನೋಭಾವವೇ! ಪ್ರಾಯಶಃ ಇದು ನಮ್ಮ ನಡುವೆ ಇರುವ ಫ್ಯೂಡಲಿಸಮ್ಮಿನ ಹಾಗೆ ಎಂದು ನಾನು ಅವಳಲ್ಲಿ ಸಾಕಷ್ಟು ಬಾರಿ ಜಗಳವಾಡಿದ್ದುಂಡು. ಅಂಥ ಸಂದರ್ಭಗಳಲ್ಲಿ ಆಕೆ ತನ್ನ ನಿಲುವಿನಿಂದ ಹೊರಬಂದದ್ದಿಲ್ಲ. ತನ್ನ ನಿಲುವನ್ನು ಗಟ್ಟಿಗೊಳಿಸಿದ್ದೇ ಹೆಚ್ಚು'.

'ಅಂದರೆ ನೀವು ಈಗ ನನ್ನ ಮನೆಯಲ್ಲಿರುವುದು ನಿಮ್ಮ ಮೇಡಂಗೆ ಇಷ್ಟವಿಲ್ಲ ಎಂದಂತಾಯ್ತು'.

'ಎಸ್, ನಾನು ನಿನ್ನಲ್ಲಿ ಇರುತ್ತೇನೆ ಎಂದು ಹೊರಡುವಾಗ ಆಕೆಗೆ ಹೇಳಿ ಹೊರಟಿರಲಿಲ್ಲ ಅಥವಾ ನಿನ್ನ ಸಮಸ್ಯೆಯೊಂದಕ್ಕೆ ನನ್ನ ಸಲಹೆ ಕೇಳಲು ನೀನು ನನ್ನನ್ನು ಕರೆಯುತ್ತಿದ್ದಿ ಎಂದೂ ಹೇಳಿಲ್ಲ. ಸಾಂದರ್ಭಿಕವಾಗಿ ನಮ್ಮ ಮನೆಗೆ ಆ ರೌಡಿಗಳು ದಾಳಿ ಇಟ್ಟರಲ್ಲ, ಅದರಿಂದ ಭಯಗೊಂಡ ಆಕೆ ಮತ್ತೆ ಸೀತಾಪುರದಿಂದ ಎಲ್ಲಿಗಾದರೂ ಹೋಗೋಣ ಎಂದದ್ದನ್ನೇ ಮುಂದಿಟ್ಟುಕೊಂಡು ಆ ಉದ್ದೇಶದಲ್ಲೇ ಇಲ್ಲಿಗೆ ಹೊರಟದ್ದು ಎಂಬ ಭಾವ ಅವಳಲ್ಲಿದೆ'.

ಜಯಂತಿ ಮಾತನಾಡಲಿಲ್ಲ. ರಾಯರು ಹೀಗೆ ಹೇಳುತ್ತಾ ತಿಂಡಿ ತಟ್ಟೆ ಖಾಲಿ ಮಾಡಿದ್ದನ್ನು ನೋಡಿದ ಜಯಂತಿ 'ಇನ್ನೂ ಒಂದು ಇಡ್ಲಿ ಇರಲಿ' ಎಂದು ಒಂದು ಇಡ್ಲಿ ಬಡಿಸಿ, ರಾಯರು ತಿನ್ನುವುದನ್ನು ನೋಡುತ್ತಾ ಕುಳಿತಳು.